ಶ್ರೀ ಎಂ. ರಘುಪತಿ (ವಿದ್ಯಾ ಮಂತ್ರಿಯವರು).—

(ಅ) ಹೌದು. ಆದಕ್ಕನುಗುಣವಾಗಿ ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ರದ್ದತಿ) ಕಾಯಿದೆ ೧೯೮೪ನ್ನು ಜಾರಿಗೊಳಿಸಲಾಗಿದೆ.

(ಆ) ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕ ಪೂರ್ತಿ ರದ್ದಾಗಿಲ್ಲ. ಕಾಯಿದೆಯ ಪ್ರಕಾರ ಹಂತ ಹಂತವಾಗಿ ಐದು ವರ್ಷಗಳಲ್ಲಿ ಕ್ಯಾಪಿಟೇಶನ್ ಶುಲ್ಕವನ್ನು ರದ್ದು ಮಾಡಲಾಗುವುದು. ೧೯೮೪-೮೫ ಮತ್ತು ೧೯೮೫-೮೬ನೇ ಶೈಕ್ಷಣಿಕ ವರ್ಷದಲ್ಲಿ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇಕಡಾ ೪೦ ರಷ್ಟು ಸ್ಥಾನಗಳನ್ನು ಸರ್ಕಾರವೇ ಪ್ರತಿಭೆ ಮತ್ತು ವೀಸಲಾತಿಯ ಮೇರೆಗೆ ತುಂಬಿದೆ, ಈ ಶೇಕಡಾ ೪೦ ರಷ್ಟು ಸ್ಥಾನಗಳಿಗೆ ಕ್ಯಾಪಿಟೇಶನ್ ಶುಲ್ಕ ಇಲ್ಲ ಉಳಿದ ಶೇಕಡಾ ೬೦ ರಷ್ಟು ಸ್ಥಾನಗಳಿಗೆ ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಆಡಳಿತ ಮಂಡಲಿ ಕ್ಯಾಪಿಟೇಶನ್ ಶುಲ್ಕ ತೆಗೆದುಕೊಳ್ಳಬಹುದು ಈ ನಿಬಂಧನೆ ಅಲ್ಪ ಸಂಖ್ಯಾತರ ಕಾಲೇಜುಗಳಿಗೆ ಅನ್ವಯಿಸುವುದಿಲ್ಲ.

ಹಾವೇರಿಯಲ್ಲಿರುವ ಪ್ರಾಥಮಿಕ ಶಾಲೆಗೆ ಅಗತ್ಯವಿರುವ ಕೊಠಡಿಗಳನ್ನು ಒದಗಿಸುವುದು

೧೮೪೮. ಶ್ರೀ ಸಿ. ಸಿ. ಪಾಟೀಲ (ಹಾವೇರಿ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಹಾವೇರಿ ಪುರಸಭಾ ಸರಹದ್ದಿನಲ್ಲಿ ಬರುವ ಪ್ರಾಥಮಿಕ ಶಾಲೆಗಳ ಅವಶ್ಯಕತೆಯ ಕೊಠಡಿಗಳನ್ನು ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

(ಆ) ಅನೇಕ ಶಾಲಾ ಕೊಠಡಿಗಳು ಬೀಳುವ ಪರಿಸ್ಥಿತಿಯಲ್ಲಿರುವುದರಿಂದ ಆ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

(ಇ) ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಅನುಗುಣವಾಗಿ ಇನ್ನು ಅನೇಕ ಶಾಲೆಗಳಲ್ಲಿ ಶಿಕ್ಷಕರಿಲ್ಲದಿರುವುದರಿಂದ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

(ಅ) ಮತ್ತು (ಆ) ೧೯೮೬-೮೭ರಲ್ಲಿ ಅಧಿಕ ಕೊಠಡಿಗಳನ್ನು ನಿರ್ಮಿಸಲು ಹಣ ಒದಗಿಸಲಾಗುವುದು.

(ಇ) ತಾಲ್ಲೂಕಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗನುಗುಣವಾಗಿ ಹೆಚ್ಚಿನ ಶಿಕ್ಷಕರ ಅವಶ್ಯಕತೆಯಿದ್ದು ೧೯೮೬-೮೭ರಲ್ಲಿ ಅಧಿಕ ಶಿಕ್ಷಕರ ಹುದ್ದೆಗಳು ಮಂಜೂರಾಗುವುದಿದ್ದು, ಈ ತಾಲ್ಲೂಕಿನ ಅವಶ್ಯಕತೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಪೂರೈಸಲಾಗುವುದು.

ಇಂಜಿನಿಯರಿಂಗ್ ಸೀಟುಗಳನ್ನು ನಿಗದಿಪಡಿಸುವುದು

೧೦೨೨. ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಪ್ರತಿ ಒಂದು ಸರಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರತಿ ಒಂದು ಜಾತಿಗೆ ಹಂಚಲಾದ ಸೀಟುಗಳ ಸಂಖ್ಯೆ ಎಷ್ಟು (ಕಳೆದ ೩ ವರ್ಷಗಳಿಗೆ ಕಾಲೇಜುವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಎಂ. ರಘಪತಿ (ಶಿಕ್ಷಣ ಸಚಿವರು)

(ಅ) ಪಂಗಡವಾರು ಅಂಕಿ ಸಂಖ್ಯೆಗಳನ್ನು ಅನುಬಂಧದಲ್ಲಿ ಇರುವಂತೆ ಲಗತ್ತಿಸಿದೆ. ಜಾತಿವಾರು ಪ್ರವೇಶದ ಮಾಹಿತಿಯು ಇಟ್ಟುಕೊಂಡಿರುವುದಿಲ್ಲ.—

ಅನುಬಂಧ

ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಥಮ ಬಿ.ಇ ಗಾಗಿ ೧೯೮೨ ರಿಂದ ೧೯೮೫ರ ವರೆಗೆ ಮಾಡಲಾದ ಪಂಗಡವಾರು ಆಯ್ಕೆಯ ವಿವರ ಈ ಕೆಳಗಿನಂತೆ ಇರುತ್ತದೆ.

ಕಾಲೇಜು	ವರ್ಷ	ಎಸ್ಸಿ	ಎಸ್ಟಿ	ಬಿಸಿ	ಬಿಸಿಎಂ	ಬಿಸಿಟಿ	ಬಿಡಿಎಸ್ಟಿ	ಜಿ	ಒಟ್ಟು
೧	೨	೩	೪	೫	೬	೭	೮	೯	೧೦
ಯು.ವಿ.ಪಿ.ಇ.	೧೯೮೨–೮೩	೫೮	೮	೧೫	೬೭	೩೬	೫೧	೧೮೦	೪೨೫
ಬೆಂಗಳೂರು	೧೯೮೩–೮೪	೫೧	೭	೧೮	೬೫	೨೮	೩೯	೧೬೭	೩೭೫
	೧೯೮೪–೮೫	೫೬	೧೨	೧೬	೫೭	೩೧	೪೬	೧೯೫	೪೧೩
ಎಸ್.ಕೆ.ಜೆ.ಟಿ.ಐ.	೧೯೮೨–೮೩	೪	೧	೨	೫	೧	೩	೨೧	೩೭
ಬೆಂಗಳೂರು	೧೯೮೩–೮೪	೩	—	—	೮	೩	೫	೧೫	೩೪
	೧೯೮೪–೮೫	೫	೧	—	೮	೧	೫	೧೮	೩೮
ಬಿ.ಟಿ.ಡಿ.	೧೯೮೨–೮೩	೩೬	೮	೧೦	೪೦	೨೦	೪೧	೫೫	೨೧೦
ದಾವಣಗೆರೆ	೧೯೮೩–೮೪	೩೫	೧೨	೮	೪೬	೧೭	೩೯	೫೩	೨೧೦
	೧೯೮೪–೮೫	೪೮	೦೭	೧೨	೫೩	೧೯	೩೯	೧೧೪	೨೯೨
ಕೆ ಆರ್.ಇ.ಸಿ.	೧೯೮೨–೮೩	೨೬	೧೦	೨	೨೪	೧೪	೧೮	೧೯೨	೨೮೬
ಸೂರತ್‌ಕಲ್	೧೯೮೩–೮೪	೩೧	೭	೫	೨೪	೧೨	೧೮	೧೮೩	೨೭೮
	೧೯೮೪–೮೫	೧೦	೩	೫	೨೩	೯	೧೩	೨೪೦	೩೦೭

ಆಗ್ರೋ ಕೈಗಾರಿಕಾ ನಿಗಮದವರಂ ರೈತರಿಗೆ ನೀಡಿದ ಸಾಲದ ಮೇಲೆ ಹೆಚ್ಚಿನ ಬಡ್ಡಿ ವಿಧಿಸಿರುವುದು

೧೭೪೪. ಶ್ರೀ ಬಿ. ಶಿವರಾಮರೆಡ್ಡಿ (ಕಾರಗೋಡು).—ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ವಿಷಯಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫ರಲ್ಲಿ ರೈತರಿಗೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಶೇಕಡ ೯ ರಷ್ಟು ಬಡ್ಡಿ ದರದಂತೆ ಸಾಲ ಕೊಟ್ಟಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ಬಡ್ಡಿ ದರವನ್ನು ಬರಬರುತ್ತ ಶೇಕಡ ೯ ರಿಂದ ಶೇಕಡ ೧೮ರ ದರಕ್ಕೆ ಏರಿಸಲಂ ಕಾರಣವೇನು ?

(ಇ) ರೈತರು ಈ ಸಾಲಗಳನ್ನು ತಾವು ಕೊಟ್ಟ ಮೊತ್ತಕ್ಕಿಂತ ಎರಡರಷ್ಟು ಕಟ್ಟಿರುವುದು ನಿಜವೇ, ಇನ್ನೂ ಉಳಿದಿರುವ ಸಾಲದ ಮೊತ್ತದಲ್ಲಿ ಸಹಕಾರ ಸಂಘಗಳಿಂದ ಬಡ್ಡಿ ಬಿಟ್ಟು ಅಸಲು ಮಾತ್ರ ವಸೂಲಿ ಮಾಡಿದ ಹಾಗೆ ಟ್ರ್ಯಾಕ್ಟರ್ ಸಾಲಗಳನ್ನು ಬಡ್ಡಿ ರಹಿತವಾಗಿ ವಸೂಲಿ ಮಾಡಲು ಸರ್ಕಾರದವರು ತಿರ್ಮಾನ ತೆಗೆದುಕೊಂಡಿದ್ದಾರೆಯೇ ?

(ಈ) ಹಾಗಿಲ್ಲದಿದ್ದಲ್ಲಿ ಈ ಸಾಲಗಳನ್ನು ರೈತರಿಂದ ಬಡ್ಡಿರಹಿತವಾಗಿ ಏಕೆ ತೆಗೆದುಕೊಳ್ಳಬಾರದು ಎಂಬುದಕ್ಕೆ ಸರ್ಕಾರದರ ನಿಲುವೇನು ?

ಶ್ರೀ ಎಂ. ಪಿ. ಪ್ರಕಾಶ್(ಕೃಷಿ ರಾಜ್ಯ ಸಚಿವರು).—

(ಅ) ಹೌದು